ಶ್ರೀ ಅಜೀಜ್‌ಸೇಟ್.—ಇದಕ್ಕೆ ಸಂಬಂಧಪಟ್ಟ ಬಿಲ್ಲನ್ನು ಈ ಸದನದಲ್ಲಿ ಈಗಾಗಲೇ ಸರ್ಕಾರದವರು ಇಂಟ್ರಡ್ಯೂಸ್ ಮಾಡಿದ್ದಾರೆ. ಅದು ಪಾಸಾದ ತಕ್ಷಣ ಏನು ಏಪರ್ಾಟು ಬೇಕೋ ಅವನ್ನು ಸರ್ಕಾರದವರು ಮಾಡುತ್ತಾರೆ. ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಕೂಡ ಮುಂದೆ ತಮಗೆ ಅವಕಾಶ ಇದೆ.

Sri T. R. SHAMANNA.—The number of slums in Bangalore about 10 years back was only 100 but today it has risen to 143. When we are interested in clearing the slums we are allowing the sl ms to come up more and m. re. What steps have been taken by the Government to see that new slums do not spring up so that we may be able to tackle the problem in a correct way ? What steps will the Government take to see that new slums do not come up ?

Sri AZEEZ SAIT.—I do concede what the hon. member has said. Probably due to shortage of houses, the number of slums is mounting. The intention of the Government is to improve the slums and not clearance because it is not possible. I assure that then the Bill which is introduced is passed, Government will take steps and bear in mind not to allow any new slums to come up.

1-30 P. M.

T. A. Drawn by Ministers

423 Sri KONANDUR LINGAPPA (Thirthahalli).—

Will the Chief Minister be pleased to state :—

the number of tours that are undertaken by each Minister and the amount of T. A. drawn by them from the date of formation of the Cabinet till to date (Detailed information may be furnished) ?

Sri D. DEVARAJ URS (Chief Minister).—

The details are furnished in the Statement placed on the Table of the House.*

ಶ್ರೀ ಕೆ. ಮಾದೇಗೌಡ.—ಇದರ ಉತ್ತರದ ವಿವರಗಳನ್ನು ಸಭೆಯ ಮುಂದಿರುವ ತಖ್ತೆಯಲ್ಲಿ ಕೊಟ್ಟಿದೆ ಎಂದು ಹೇಳಿದ್ದೀರಿ. ಇದರ ಉತ್ತರವನ್ನು ನಮಗೆ ಕೊಡದಿದ್ದರೆ ನಾವು ನಪ್ಲಿಮೆಂಟರಿ ಹೇಗೆ ತಾನೆ ಹಾಕುವುದು ?

ಅಧ್ಯಕ್ಷರು.—ಅದನ್ನು ತಾವು ಮೊದಲೇ ಬಂದು ನೋಡಿಕೊಂಡಿರಬೇಕು. ಅದು ಮೊದಲಿನಿಂದಲೂ ನಡೆದುಕೊಂಡು ಬಂದ ಪದ್ಧತಿ, ಹೊಸ ಪದ್ಧತಿಯೇನೂ ಅಲ್ಲ.

Sri B. B. SAYANAK.—If the statement is placed on the Table, only one member can read it and not the others. Do you want only one member alone should ask supplementaries and not the others ?

MADAM SPEAKER.—This practice has been in vogue for a long time. If any member is interested in it, he can come and look into it.

---

*Copy placed in the Mysore Legislature Library *Vide* No. 16 Dalers 16-3-1973.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೇಳಿದ್ದು ನಟಿವ ಸಂಃ ಟ ರಚನೆಯಾದಂದಿನಿಂದ ಇಂದಿನವರೆಗೆ ಯಾರ್ಯಾರು, ಎಷ್ಟೆಷ್ಟು ಭತ್ಯವನ್ನು ತೆಗೆದುಕೊಂಡಿದ್ದಾರೆ ಎಂದು. ಅದಕ್ಕೆ ಹೋವ ವರ್ಷದ ಮಾರ್ಚ್, ಏಪ್ರಿಲ್, ಮೇ, ಜೂನ್—ಈ ನಾಲ್ಕು ತಿಂಗಳದ್ದು ಇಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ಇವಕ್ಕೆ ಉತ್ತರ ಕೂಡ ಪೂರ್ತಿಯಾಗಿಲ್ಲ. ಇದಕ್ಕೆ ನಮರ್ಪಕವಾದ ಉತ್ತರ ಬರುವಂತೆ ಮಾತುವುವ ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಯಾವ ತಾರೀಖಿನ ವರೆಗೆ ಕೇಳಿರುತ್ತೀರೋ, ಅಲ್ಲಿಯ ವರೆಗೆ ಕೊಟ್ಟಿದ್ದಾರೆ; ಇವತ್ತಿನವರೆಗೆ ಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೇಳಿದ ತಾರೀಖಿನವರೆಗೆ ತೆಗೆದುಕೊಂಡರೂ ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ನಾಲ್ಕು ತಿಂಗಳಿಗೆ ಈ ರೀತಿ ಟಿ. ಎ. ಪಡೆದು ಕೊಂಡಿದ್ದಾರೆ :- ಸಿದ್ದವೀರಪ್ಪನವರು ರೂ. 3,500, ಬಸವಲಿಂಗಪ್ಪನವರು ರೂ. 6 ಸಾವಿರ ಚಿಲ್ಲರೆ; ಮಲ್ಲಿಕಾರ್ಜುನಸ್ವಾಮಿಯವರು ರೂ. 3 ಸಾವಿರ ಚಿಲ್ಲರೆ, ಬದರಿನಾರಾಯಣ ರವರು ರೂ. 7 ಸಾವಿರ ಚಿಲ್ಲರೆ, ಶಂಕರ ಆಳ್ವರವರು ರೂ. 3 ಸಾವಿರ ಚಿಲ್ಲರೆ, ಹುಚ್ಚಮಾಸ್ತಿಗೌಡರು ರೂ 4. ಸಾವಿರ ಚಿಲ್ಲರೆ, ಅಜೀಜ್ ಶೇಠರು ರೂ. 8 ಸಾವಿರ ಚಿಲ್ಲರೆ. ಮುಖ್ಯಮಂತ್ರಿ ಯವರನ್ನು ಬಿಟ್ಟರೆ ಇವರೇ ಎರಡನೆಯವರು. ಆ ಮೇಲೆ ಕೆ. ಎಚ್. ಪಾಟೀಲರು ರೂ. 6 ಸಾವಿರ ರೂಪಾಯಿ, ಘೋರ್ಪಡೆಯವರು ರೂ. 4 ಸಾವಿರ ರೂಪಾಯಿ, ಕೃಷ್ಣರವರು ರೂ. 5 ಸಾವಿರ ಚಿಲ್ಲರೆ,—ಹೀಗೆ ನಾಲ್ಕು ತಿಂಗಳಿಗೆ ಸರಾಸರಿ ತಿಂಗಳಿಗೆ ಒಬ್ಬ ಮಂತ್ರಿಯವರು 1500 ರೂಪಾಯಿ ಟಿ. ಎ. ತೆಗೆದು ಕೊಂಡಿರುತ್ತಾರೆ. ಈ ಸಮಾಜವಾದಿ ಮಂತ್ರಿಗಳು ಈ ರೀತಿ ತಿಂಗಳಿಗೆ ಸರಾಸರಿ 1500 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

† ಶ್ರೀ ಡಿ. ದೇವರಾಜ ಅರಸ್.- ಇವರು ಸಮಾಜವಾದವನ್ನು ಎತ್ತಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಪ್ರವಾಸ ಮಾಡದೆ ಸರ್ಕಾರ ನಡೆಸುವುದಕ್ಕೂ ಸಾಧ್ಯವಿಲ್ಲ; ಸಮಾಜವಾದವನ್ನು ಜಾರಿಗೆ ತರುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಪ್ರವಾಸ ಮಾಡಲೇಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಕೆಲವರು ಪ್ರವಾಸಮಾಡಿದ್ದು ಸಾಲದು ಎಂದು ಹೇಳುತ್ತಿದ್ದಾರೆ. ಹಾಗೆ ಪ್ರವಾಸ ಮಾಡಿದ ಮೇಲೆ ಖರ್ಚು ಆಗಿಯೇ ಆಗುತ್ತದೆ. ಕಾರಿನಲ್ಲಿ ಹೋದರೆ ಅದಕ್ಕೆ ಪೆಟ್ರೋಲ್ ಹಾಕಲೇ ಬೇಕಾಗುತ್ತದೆ; ಮತ್ತು ಭತ್ಯ ಕೊಡಲೇಬೇಕಾಗುತ್ತದೆ. ಅದನ್ನು ಹೇಗೆ ಕಡಿಮೆ ಮಾಡಬೇಕೆಂದು ಹೇಳಿಕೊಟ್ಟರೆ ಆಲೋಚನೆ ಮಾಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಕಡಿಮೆ ಮಾಡುವುದಕ್ಕೆ ನಾವು ಹೇಗೆ ಗೌವರ್ನಮೆಂಟ್ ಬಸ್ಸಿನಲ್ಲಿ ಬರುತ್ತೇವೋ ಹಾಗೆಯೇ ಅವರೂ ಮಾಡಿದರೆ ಕಡಿಮೆ ಮಾಡಬಹುದು. ಆಗ ಕಾರಿಗೆ ಪೆಟ್ರೋಲ್ ಹಾಕುವುದೂ ತಪ್ಪುತ್ತದೆ, ಡ್ರೈವರಿಗೆ ಸಂಬಳ ಕೊಡುವುದೂ ತಪ್ಪುತ್ತದೆ. ಎರಡನೆಯದು ಏನೆಂದರೆ ಕೆಲವುಮಂತ್ರಿಗಳಂತೂ ಬರೇ ಪ್ರವಾಸದ ಮಂತ್ರಿಗಳೇ ಆಗಿದ್ದಾರೆ. ಆದ್ದರಿಂದ ಅಂಥವರ ಬಗ್ಗೆ ನಿರ್ಬಂಧ ಹಾಕುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಬಸ್ಸಿನಲ್ಲಿ ಹೋಗಬೇಕೆಂದು ಲಿಂಗಪ್ಪನವರು ಹೇಳುತ್ತಾರೆ. ಇನ್ನೊಬ್ಬರು ಎತ್ತಿನ ಗಾಡಿಯಲ್ಲಿ ಹೋಗಬಹುದು ಎಂದು ಸಹ ಹೇಳುತ್ತಾರೆ. ಲಿಂಗಪ್ಪನವರ ಕ್ಷೇತ್ರಕ್ಕೆ ಬರುವಾಗ ಅವರು ಹೇಳಿದ ಹಾಗೆ ಬರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ಕಾಲ ನಿಮ್ಮದು ನಮ್ಮದು ಅಲ್ಲ. ಕಾಲ ಬಹಳ ಮುಖ್ಯವಾಗಿದೆ. ಆ ತರಹ ಹೋದರೆ ಯಾವ ಕೆಲಸವನ್ನು ಮಾಡಿಕೊಂಡು ಬರಲೂ ಆಗುವುದಿಲ್ಲ. ಇದು ಆಧುನಿಕ ಯುಗ. ಅದಕ್ಕೆ ತಕ್ಕಂತೆ ನಾವು ಕೆಲಸ ಮಾಡಬೇಕಾಗಿದೆ. ಪ್ರವಾಸ ಮಾಡಿ ಕಾಲಹರಣ ಮಾಡಿದರೆ ತಾವು ಹೇಳಿ, ಆಗ ನಾನು ಒಪ್ಪುತ್ತೇನೆ. ಉದಾಹರಣೆಗೆ ಫೌಂಡೇಶನ್ ಸೆರೆಮನಿ, ಓಪನಿಂಗ್ ಸೆರಮನಿ—ಇತ್ಯಾದಿಗಳಿಗೆ ಹೋಗುವುದರ ಬಗ್ಗೆ ತಾವು ಟೀಕೆ ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನೀವು ಸಹಕಾರ ಕೊಡಬೇಕು. ಎಷ್ಟೋಸಲ ಒತ್ತಾಯ ಜಾಸ್ತಿ ಬಂದು ಇಂತಹ ಸಮಾರಂಭಗಳಿಗೆ ಹೋಗಬೇಕಾಗುತ್ತದೆ. ಅದನ್ನು ತಪ್ಪಿಸುವುದಕ್ಕೆ ತಾವು ಸಹಕಾರ ಕೊಟ್ಟು ಕೆಲಸ ಮಾಡಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಈ ರೀತಿಯ ಒತ್ತಾಯವನ್ನು ಸದಸ್ಯರು ಮತ್ತು ಸದಸ್ಯೇತರರು ತರುತ್ತಿದ್ದಾರೆ.

ಮತ್ತೆ ಹೆಚ್ಚು ಹೆಚ್ಚು ಪ್ರವಾಸ ಮಾಡುವವರನ್ನು ಕಡಿಮೆಮಾಡಿ ಎಂದು ಹೇಳುವುದು, ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡುವುದೂ ಇರುತ್ತದೆ. ಕೆಲವು ವೇಳೆ ಸಂದರ್ಭಾನುಸಾರವಾಗಿ ಹೆಚ್ಚಿಗೆ ಪ್ರವಾಸ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಇದು ಅನಿವಾರ್ಯ ಖಂಡಿತ.

ಶ್ರೀ ಜಿ. ಮಾದೇಗೌಡ.—ಒಂದೇ ಸಭೆಗೆ ಇಬ್ಬರು—ಮೂವರು ಮಂತ್ರಿಗಳು ಹೊಗುತ್ತಾರೆ. ಆ ರೀತಿಯಾಗಿ ಹೋಗುವ ಸಂದರ್ಭದಲ್ಲಿ ಒಂದೇ ಕಾರಿನಲ್ಲಿ ಎಲ್ಲರೂ ಹೋಗುವುದು ಉಚಿತವಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಒಂದು ಸಭೆಗೆ ಇಬ್ಬರು—ಮೂವರು ಹೋಗಬಾರದೆಂದು ನನ್ನ ಭಾವನೆ. ಮಂತ್ರಿಗಳಿಗೆ ನಾನು ಈ ರೀತಿ ಹೇಳಿಕೆ ಕೊಡುವಾಗ ನನ್ನನ್ನೇ ಬಲೆಗೆ ಕೆಡವಿದ್ದಾರೆ. ಅದು ಹೇಗೆಂದರೆ, ಒಂದೊಂದು ಸಾರಿ ಅಕಸ್ಮಾತ್ತಾಗಿ ಆ ರೀತಿ ಹೋಗಬೇಕಾಗುತ್ತೆ. ಮಾನ್ಯ ಶ್ರೀ ಪುಟ್ಟಸ್ವಾಮಯ್ಯನವರು ಅವರೆ ಕ್ಷೇತ್ರಕ್ಕೆ ಕರೆಯುತ್ತಾರೆ, ನಾನು ಒಪ್ಪಿಕೊಂಡಿದ್ದೇನೆ. ಇನ್ನೊಣ ಇನ್ನೊಬ್ಬರನ್ನೂ ಅಷ್ಟು ಹೊತ್ತಿಗೆ ಕರೆದುಬಿಟ್ಟಿರುತ್ತಾರೆ. ನಾನು ಹೊಡಡೋ ದಿವಸವೇ ಅವರೂ ಅಲ್ಲಿಗೆ ಬಂದಿರುತ್ತಾರೆ. ಇನ್ನೊಬ್ಬರೂ ಬಂದಿರುತ್ತಾರೆ. ಇದನ್ನು ಮೊದಲೇ ನನಗೆ ತಿಳಿಸಿರುವುದಿಲ್ಲ. ನಾನು ಒಬ್ಬನೇ ಹೋಗುತ್ತೇನೆಂದು ನಾನು ತಿಳಿದುಕೊಂಡಿದ್ದರೂ ಅಲ್ಲ ಮೂರು ನಾಲ್ಕು ಜನ ಮಂತ್ರಿಗಳು ಬಂದಿರುತ್ತಾರೆ. ಅದ್ದರಿಂದ—ಸಾಧ್ಯವಾದಷ್ಟು ಇಬ್ಬರು—ಮೂವರು ಒಂದೇ ಕಡೆ ಪ್ರವಾಸ ಮಾಡುವುದನ್ನು ಆದರಲ್ಲಿ ಏಕಕಾಲದಲ್ಲಿ ಹೋಗುವುದನ್ನು ಬಿಡಬೇಕೆಂದು ಹೇಳುತ್ತೇನೆ. ಕ್ಷಾಮ ನಿವಾರಣಾ ಕೆಲಸಕಾರ್ಯಗಳಿಗಾಗಿ ಬಿದರೆ, ಗುಲ್ಬರ್ಗ ಮುಂತಾದ ಪ್ರದೇಶಗಳಿಗೆ ಅನಿವಾರ್ಯವಾಗಿ ಕೆಲವರು ಒಂದೆ ಸಾರಿ ಹೋಗಬೇಕಾಗಿ ಬರುತ್ತದೆ. ಅಂತಹ ಸಮಯದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಹಚ್ಚಮಾಸ್ತಿಗೌಡ.—ನಮ್ಮನ್ನು ಪೋಸದ ಬಲೆಗೆ ಹಾಕುವುದನ್ನು ಅವರು ಕೂಡಲೇ ಬಿಡಬೇಕು. ಅದನ್ನು ಎಲ್ಲರೂ ಮಾಡುತ್ತಾರೆ. ಅದು ಎಲ್ಲಾ ಕಡೆಯೂ ನಡೆಯುತ್ತಿದೆ. ಅನಿವಾರ್ಯವಾಗಿ ಕೆಲವು ಸಂದರ್ಭಗಳಲ್ಲಿ ಹೋಗಲೇ ಬೇಕಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಮಂತ್ರಿಗಳನ್ನು ಹೆಚ್ಚಿಗೆ ಕರೆಯುವುದನ್ನು ಬಿಡಬೇಕು ಎಂದು ಹೇಳುವುದು ಅದು ಸಾಧ್ಯವಿಲ್ಲದಂಥ ಕೆಲಸ. ಏಕೆಂದರೆ ಅವರೂ ಸಹ ಈ ದೇಶದ ಪ್ರಜಾ ಪ್ರತಿನಿಧಿಗಳು. ಅವರೂ ಸಹ ನಮ್ಮ ಹಾಗೆ ಜನತೆಯ ಕಷ್ಟಸುಖಗಳನ್ನು ಹಂಚಿಕೊಳ್ಳಬೇಕು ಅವರು ಕರೆದಾಗ ಬರಲೇಬೇಕು. ಒಂದು ಆದರ, ಪ್ರೀತಿ, ವಿಶ್ವಾಸಗಳಿಂದ ಕರೆಯುತ್ತಾರೆ ಒಂದು ಕಡೆ ಪ್ರೋಗ್ರಾಂ ಕೊಟ್ಟು ಆಮೇಲೆ ಯಾರಜೋ ಒತ್ತಾಯ ಬಂದರೆ ಅದನ್ನು ಕ್ಯಾನ್ಸಲ್ ಮಾಡುತ್ತಾರೆ. ಆದರಿಂದ ಅಗತಕ್ಕ ತೊಂದರೆ ಬಹಳ ಜಾಸ್ತಿ, ಆದ್ದರಿಂದ ಮೊದಲೇ ಪಾಗಾನ ಮಾಡಿದಂತೆ ನಡೆದು ಕೊಳ್ಳುವುದು ಸರಿಯಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಕ್ಯಾನ್ಸಲ್ ಮಾಡುವ ಸಂದರ್ಭ ಬಂದಾಗ ಪಾತ್ರ ಅದನ್ನು ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದಪ್ಪ.—ಈ ಪಕ್ಷದವರು ಕರೆದಿರುತ್ತಾರೆ. ಆ ಮೇಲೆ ನಿಮ್ಮ ಪಕ್ಷದವರು ಕರೆದರೆ ನಮ್ಮ ಪಕ್ಷದವರ ಕರೆಯನ್ನು ಕ್ಯಾನ್ಸಲ್ ಮಾಡುತ್ತೀರಿ. ಆ ರೀತಿಯಾಗಿ ಇನ್ನು ಮುಂದೆ ಮಾಡಬೇಡಿ.

ಶ್ರೀ ಡಿ. ದೇವರಾಜ ಅರಸ್.—ಪ್ರವಾಸಮಾಡುವಾಗ ಶಾಸನ ಸಭೆಯ ಸದಸ್ಯರು ಯಾವ ಪಕ್ಷದವರೇ ಆಗಲೀ ಕರೆದರೆ, ನಿಮ್ಮ ಪಕ್ಷದವರೇ ಆಗಲಿ, ನಮ್ಮ ಪಕ್ಷದವರೇ ಆಗಲೀ ಕರೆದರೆ, ಹೋಗಲೇಬೇಕು. ಆದರೆ ಬೇರೆಯವರು ಕರೆದರೆ ಅಲ್ಲಿಗೆ ಹೋಗಬಾರದೆಂದು ಹೇಳುವವನು ನಾನಲ್ಲ. ಉದ್ದೇಶಪೂರ್ವಕವಾಗಿ ಆ ರೀತಿ ಏನಾದರೂ ಮಾಡಿದ್ದರೆ, ಅವರಿಗೆ ಖಂಡಿತವಾಗಿ ತಿಳುಸುತ್ತೇನೆ. ಸರ್ಕಾರದ ಕೆಲಸಕ್ಕೆ ನಾವೆಲ್ಲರೂ ಒಂದೇ ಎಂಬುದನ್ನು ತಿಳಿಸಬೇಕಾಗುತ್ತದೆ.

Disposal of Lands belonging to Tobacco Company. Sandur.

452. Sri KAGODU THIMMAPPA (Sagar).—

Will the Minister for Revenue be pleased to state.—

(*a*) the extent of land granted by the Ex-Ruler of Sandur to th Tobacoo Company that was in existence then:

(*b*) who is in possession of these lands at present ;